## ವಿಶ್ವನಂದಿನಿ ಲೇಖನಮಾಲೆ – 213

# ಪದ್ಮನಾಭತೀರ್ಥರಲ್ಲಿ ನಾವು ಬೇಡಬೇಕಾದ್ದೇನು?

ಶ್ರೀಮದಾಚಾರ್ಯರ ಪರಂಪರೆ ಪರಮಾದ್ಭುತವಷ್ಟೇ ಅಲ್ಲ, ಪರಿಪೂರ್ಣವಾದದ್ದು ಸಹ.

ಸಜ್ಜನರನ್ನು ಉದ್ಧಾರ ಮಾಡಲು ಅವತರಿಸಿ ಬಂದ ಮುಖ್ಯಪ್ರಾಣದೇವರು ಸಜ್ಜನರ ಉದ್ಧಾರಕ್ಕಾಗಿ ಏನೆಲ್ಲ ಪರಿಕರಗಳ ಆವಶ್ಯಕತೆಯಿದೆಯೋ ಅವೆಲ್ಲವನ್ನೂ ಅನುಗ್ರಹಿಸಿದ್ದಾರೆ. ಶ್ರೀಮಧ್ವವಿಜಯದ ಉಪನ್ಯಾಸ ಮಾಲಿಕೆಯಲ್ಲಿ ಆ ಅನುಗ್ರಹಗಳ ಕುರಿತು ವಿಸ್ತಾರವಾಗಿ ತಿಳಿದಿದ್ದೇವೆ.

ತಮ್ಮ ಗ್ರಂಥಗಳ ಮುಖಾಂತರ, ತಾವು ಅರ್ಚಿಸಿದ ಪ್ರತಿಮೆಗಳ ಮುಖಾಂತರ, ತಾವಿನ್ನೂ ಸಶರೀರರಾಗಿಯೇ ಉತ್ತರಬದರಿಕಾಶ್ರಮದಲ್ಲಿದ್ದು ಹಾಗೂ ಅದೃಶ್ಯರಾಗಿ ಶ್ರೀಮದುಡುಪಿಯ ಕ್ಷೇತ್ರದಲ್ಲಿದ್ದು ಭಕ್ತರ ಸಕಲ ತಾಪತ್ರಯಗಳನ್ನು ಪರಿಹರಿಸಿ ಅವರನ್ನು ಉದ್ಧರಿಸುವ ಮುಖಾಂತರ

ಸಜ್ಜನರನ್ನು ಪೊರೆಯುತ್ತಿರುವ ಶ್ರೀಮದಾಚಾರ್ಯರು ತಮ್ಮ ಪರಮಾದ್ಭುತ ಪರಂಪರೆಯ ಮುಖಾಂತರ ಸಹಿತ ದಿವ್ಯವಾದ ಕಾರ್ಯಗಳನ್ನು ಮಾಡುತ್ತಿದ್ದಾರೆ.

ಒಬ್ಬ ಜೀವ ಸಂಸಾರದಿಂದ ಉದ್ಧಾರವಾಗಬೇಕಾದರೆ ಅವನಿಗೆ ಶಾಸ್ತ್ರಾಧ್ಯಯನದಲ್ಲಿ, ತತ್ವಾನುಷ್ಠಾನದಲ್ಲಿ ಆಸಕ್ತಿ ಮೂಡಬೇಕು. ಆದರೆ ಸಂಸಾರದ ಕಷ್ಟ ಕೋಟಲೆಗಳ ಮಧ್ಯದಲ್ಲಿ, ರಾಗದ್ವೇಷಗಳ ಸುಳಿಯಲ್ಲಿ, ವಿಷಯ ಪದಾರ್ಥಗಳ ಬಂಧನದಲ್ಲಿ ಸಿಲಿಕುರಿವ ಜೀವ ಸಾಧನೆ ಹೇಗೆ ಮಾಡಿಯಾನು. ಸಾಧನೆಯ ಮಾರ್ಗದಲ್ಲಿ ಹೇಗೆ ಹೆಜ್ಜೆಯಿಟ್ಟಾನು?

ಕೃತಾದಿಯುಗಗಳಲ್ಲಿ ಇದರ ವ್ಯವಸ್ಥೆ ಬೇರೆಯ ತರಹ ಇರುತ್ತದೆ. ತನಗೆ ಬೇಕಾದ್ದನ್ನು ಪಡೆಯಬೇಕು ಮತ್ತು ತನಗೆ ಬೇಡಾದ್ದರಿಂದ ದೂರವಾಗಬೇಕು ಎಂದು ಬಯಸುವ ವ್ಯಕ್ತಿಗೆ ವೇದಗಳು ಆ ಉಪಾಯಗಳನ್ನು ತಿಳಿಸುತ್ತವೆ. ವೇದೋಕ್ತವಾದ ಕರ್ಮಗಳ ಆಚರಣೆಯನ್ನು ಮಾಡುವದರಿಂದ ಜೀವ ಆ ಫಲಗಳನ್ನು

ಮತ್ತಷ್ಟು ಐಹಿಕ ಫಲಗಳನ್ನು ಪಡೆಯುತ್ತಾನೆ. ಕಡೆಗೆ ಈ ವಿಷಯ ಪದಾರ್ಥಗಳ ನಶ್ವರತೆಯ ಅರಿವು ಮೂಡಿ ಈ ಲೌಕಿಕ ಪದಾರ್ಥಗಳನ್ನು ಬೆನ್ನಟ್ಟುವದು ಬೇಡ ಶಾಶ್ವತವಾದ ಸುಖವನ್ನು ಪಡೆಯೋಣ ಎಂದು ಭಗವಂತನ ಕುರಿತು ಚಿಂತಿಸಲು, ತಿಳಿಯಲು ಆರಂಭಿಸುತ್ತಾನೆ, ಉದ್ಧಾರವಾಗುತ್ತಾನೆ. ಅದಕ್ಕಾಗಿಯೇ **"ರೋಚನಾರ್ಥಾ ಫಲಶ್ರುತಿಃ"** ಎಂದು ಶಾಸ್ತ್ರಗಳು ಹೇಳುತ್ತವೆ. ವೇದಶಾಸ್ತ್ರಗಳಲ್ಲಿ ಜೀವನಿಗೆ ಆಸಕ್ತಿ ಹುಟ್ಟಲೆಂದೇ ವೇದಗಳಲ್ಲಿ ಸಕಲ ಅಭೀಷ್ಟಗಳನ್ನು ಕರುಣಿಸುವ ಉಪಾಯಗಳನ್ನು ತಿಳಿಸಲಾಗಿವೆ ಎಂದು.

ಆದರೆ, ಕಲಿಯುಗದಲ್ಲಿ ಹಾಗಿಲ್ಲ. ಮೊದಲಿಗೆ ವೇದಗಳೇ ಪರಿಪೂರ್ಣವಾಗಿ ಉಪಲಬ್ಧವಿಲ್ಲ. ಉಪಲಬ್ಧವಿರುವದನ್ನೂ ನಾವು ಅಧ್ಯಯನ ಮಾಡುವದಿಲ್ಲ. ಅಧ್ಯಯನ ಮಾಡಿರುವದನ್ನೂ ಸರಿಯಾದ ಕ್ರಮದಲ್ಲಿ ಮಾಡಿರುವದಿಲ್ಲ. ಮಾಡಿದ್ದನ್ನು ಅನುಷ್ಠಾನಕ್ಕೆ ತರುವದಿಲ್ಲ. ಅನುಷ್ಠಾನಕ್ಕೆ ತಂದಿದ್ದರಲ್ಲಿಯೂ ಮತ್ತೆ ಲೋಪಗಳು ದೋಷಗಳು.

ಹೋಮ ಮಾಡೋಣ ಎಂದರೆ ತುಪ್ಪದಿಂದ ಹಿಡಿದು ಇಟ್ಟಿಗೆಯವರೆಗಿನ ಎಲ್ಲ ಪದಾರ್ಥಗಳೂ ಅಶುದ್ಧ. ಹಸುವಿನ ತುಪ್ಪವೇ ಆದರೂ ಆ ಹಸುವನ್ನೇ ಇವತ್ತಿನ ಕಲಿ ಕಲುಷಿತಗೊಳಿಸಿದ್ದಾನೆ. ಅಭಿವೃದ್ಧಿಯ ಹೆಸರಿನಲ್ಲಿ ಹಸುವಿನ ದೇಹದಲ್ಲಿ ಹಂದಿ ಮುಂತಾದ ಪ್ರಾಣಿಗಳ ದೇಹದ ಗುಣಗಳನ್ನು ವಿಜ್ಞಾನಿಗಳು ಮೂಡಿಸಿದ್ದಾರೆ.

ಹೀಗೆ ಯಜ್ಞಕ್ಕೆ ಬಳಸುವ ಪದಾರ್ಥಗಳಿಂದ ಆರಂಭಿಸಿ ಮಂತ್ರಗಳವರೆಗೆ ಎಲ್ಲದರಲ್ಲಿಯೂ ಲೋಪದೋಷಗಳು ತಾಂಡವವಾಡುತ್ತಿವೆ.

ಹಾಗಾದರೆ ಉದ್ಧಾರವಾಗುವ ಬಗೆಯೆಂತು? ಉದ್ಧಾರ ಬೇಡ, ನಮ್ಮ ಕಷ್ಟ ಕೋಟಲೆಗಳಿಂದ ದೂರವಾಗುವ ಬಗೆಯೆಂತು?

ಶ್ರೀಮದಾಚಾರ್ಯರ ಕಾರುಣ್ಯ ಅನಂತ. ಈ ಸಮಸ್ಯೆಗೆ ಪರಿಹಾರವಾಗಿಯೇ ಸಮಸ್ತ ಗುರುಗಳನ್ನೂ, ಮುಖ್ಯವಾಗಿ ಮಂತ್ರಾಲಯಪ್ರಭುಗಳಾದ ಶ್ರೀರಾಘವೇಂದ್ರ-

ತೀರ್ಥಗುರುಸಾರ್ವಭೌಮರನ್ನು ನಮಗೆ ಅನುಗ್ರಹಿಸಿದ್ದಾರೆ.

ಶ್ರೀರಾಯರ ವೃಂದಾವನದ ಪ್ರದಕ್ಷಿಣೆ ಮಾಡುವದರಿಂದ, ನಮ್ಮ ಕಷ್ಟ ಕಾರ್ಪಣ್ಯಗಳು ದೂರವಾಗುತ್ತವೆ, ನಾವು ಬಯಸುವ ಸಾತ್ವಿಕ ಅಪೇಕ್ಷೆಗಳು ಪರಿಪೂರ್ಣವಾಗುತ್ತವೆ. ಆ ಮುಖಾಂತರ ಶ್ರೀ ರಾಘವೇಂದ್ರಸ್ವಾಮಿಗಳಂತಹ ಮಹಾನುಭಾವರ ಸಂಪರ್ಕಕ್ಕೆ ಬರುತ್ತೇವೆ. ಇದೇ ಕ್ರಮದಲ್ಲಿ, ಅವರ ಪಾದೋದಕ ಹಸ್ತೋದಕಗಳನ್ನು ಸ್ವೀಕಾರ ಮಾಡುವ ಸೌಭಾಗ್ಯವನ್ನು ಪಡೆದು ಅವರ ಅನುಗ್ರಹಕ್ಕೆ ಪಾತ್ರರಾಗಿ ಆಚಾರ್ಯರ ಶಾಸ್ತ್ರದ ಅಧ್ಯಯನ ಮಾಡುವ ಸೌಭಾಗ್ಯವನ್ನು ಪಡೆದುಕೊಳ್ಳುತ್ತೇವೆ.

ಹೀಗೆ ಸಾಧನದ ಮಾರ್ಗದಿಂದ ಅತೀ ದೂರದಲ್ಲಿರುವ, ವಸ್ತುಸ್ಥಿತಿಯಲ್ಲಿ ಆ ಸಾಧನಮಾರ್ಗಕ್ಕೆ ವಿರುದ್ಧವಾದ ಮಾರ್ಗದಲ್ಲಿ ನಡೆಯುತ್ತಿರುವ ನಮ್ಮನ್ನು ಸಾಧನಮಾರ್ಗಕ್ಕೆ ತರುವದರಿಂದ ಆರಂಭಿಸಿ, ಆ ಮಾರ್ಗದಲ್ಲಿ ನಡೆಯಬೇಕಾದರೆ ಉಂಟಾಗುವ ಪ್ರತಿಯೊಂದು

ಸಮಸ್ಯೆಗೂ ಉತ್ತರವನ್ನಾಗಿ ಶ್ರೀಮದಾಚಾರ್ಯರು ತಮ್ಮ ದಿವ್ಯಪರಂಪರೆಯನ್ನು ನಮಗೆ ಅನುಗ್ರಹಿಸಿದ್ದಾರೆ. ವಿಘ್ನಪರಿಹಾರಕ್ಕಾಗಿ ಗಣಪತಿಯನ್ನು, ಐಶ್ವರ್ಯಕ್ಕಾಗಿ ಇಂದ್ರದೇವರನ್ನು, ದಾಂಪತ್ಯಕ್ಕಾಗಿ ರುದ್ರದೇವರನ್ನು ನಿಯಮಿಸಿ ಪರಮಾತ್ಮ ನಮ್ಮನ್ನು ಅನುಗ್ರಹಿಸುವಂತೆ

ಕಷ್ಟಕಾರ್ಪಣ್ಯಗಳ ಪರಿಹಾರಕ್ಕಾಗಿ ಸಕಲ ಗುರುಗಳನ್ನು, ಮುಖ್ಯವಾಗಿ ಶ್ರೀರಾಘವೇಂದ್ರತೀರ್ಥಗುರುಸಾರ್ವಭೌಮರನ್ನು,

ವಿಘ್ನಗಳ ಪರಿಹಾರಕ್ಕೆ, ನಮ್ಮದೇ ಜನರಿಂದ ಉಂಟಾಗುವ ಸಮಸ್ಯೆಗಳ ಪರಿಹಾರಕ್ಕೆ ಅಕ್ಷೋಭ್ಯವೈಷ್ಣವರಾದ ಕಂಬಾಲೂರು ಶ್ರೀ ರಾಮಚಂದ್ರತೀರ್ಥಶ್ರೀಪಾದಂಗಳವರನ್ನು,

ಗುರುಗಳ ಮಾಹಾತ್ಮ್ಯವನ್ನು ಕೀರ್ತನ ಮಾಡುವ ಸೌಭಾಗ್ಯವನ್ನು ಕರುಣಿಸಲು ಶ್ರೀ ನಾರಾಯಣಪಂಡಿತಾಚಾರ್ಯರನ್ನು,

ಗುರುಗಳ ಸೇವೆಯನ್ನು ಮಾಡುವ ಸೌಭಾಗ್ಯವನ್ನು ಕರುಣಿಸಲು ಶ್ರೀ ತ್ರಿವಿಕ್ರಮಪಂಡಿತಾಚಾರ್ಯರನ್ನು

ಭಗವದಾರಾಧನೆಯ ಕ್ರಮವನ್ನು ಕಲಿಸಲು ಶ್ರೀ ಪುರಂದರಾದಿ ದಾಸವರೇಣ್ಯರನ್ನು

ಶಾಸ್ತ್ರಾಧ್ಯಯನದ, ಶಾಸ್ತ್ರೋಪಾಸನೆಯ ಕ್ರಮವನ್ನು ಕಲಿಸಲು ಶ್ರೀ ಭಾಷ್ಯದೀಪಿಕಾಚಾರ್ಯರನ್ನು, ಶ್ರೀ ಸುಮತೀಂದ್ರತೀರ್ಥಶ್ರೀಪಾದಂಗಳವರನ್ನು,

ಮಹಾಗುರುಗಳು ನಮಗೆ ನೀಡುವ ಜವಾಬ್ದಾರಿಯನ್ನು, ಸತ್ಕಾರ್ಯವನ್ನು ಪರಿಪೂರ್ಣಗೊಳಿಸಲು,  ಶ್ರೀ ಶೇಷಚಂದ್ರಿಕಾ-ಚಾರ್ಯರನ್ನು

ವಾದಿನಿಗ್ರಹ ಮಾಡುವ ಸಾಮರ್ಥ್ಯವನ್ನು ಅನುಗ್ರಹಿಸಲು ಶ್ರೀಮದ್ವಾದಿರಾಜ, ಶ್ರೀಮದ್ವಿಜಯೀಂದ್ರ ಗುರುಸಾರ್ವಭೌಮರನ್ನು

ಶಿಷ್ಯರಿಗೆ ತತ್ವಬೋಧನೆಯ ಮಾಡುವ ಸಾಮರ್ಥ್ಯವನ್ನು ಅನುಗ್ರಹಿಸಲು ಶ್ರೀ ಶ್ರೀಪಾದರಾಜಯೋಗಿಯವರ್ಯರನ್ನು,

ತತ್ವನಿರ್ಣಯ ಮಾಡುವ ಸಾಮರ್ಥ್ಯವನ್ನು ಅನುಗ್ರಹಿಸಲು ಶ್ರೀಮದ್ವ್ಯಾಸರಾಜ-ಗುರುಸಾರ್ವಭೌಮರನ್ನು,

ಆಚಾರ್ಯರ ಶಾಸ್ತ್ರವ್ಯಾಖ್ಯಾನ ಮಾಡುವ ಸೌಭಾಗ್ಯ ಸಾಮರ್ಥ್ಯಗಳನ್ನು ಅನುಗ್ರಹಿಸಲು ಶ್ರೀಮಟ್ಟೀಕಾಕೃತ್ಪಾದರನ್ನು

ಆಚಾರ್ಯರ ಶಾಸ್ತ್ರದ ಫಲವನ್ನು ಪಡೆಯುವ ಅರ್ಹತೆಯನ್ನು ಅನುಗ್ರಹಿಸಲು ಶ್ರೀ ಮಧ್ವಾನುಜಾಚಾರ್ಯರನ್ನು  ಶ್ರೀಮದಾಚಾರ್ಯರು ಅನುಗ್ರಹಿಸಿದ್ದಾರೆ.

ಎಲ್ಲ ಗುರುಗಳೂ ಎಲ್ಲವನ್ನೂ ಅನುಗ್ರಹಿಸಬಲ್ಲರಾದರೂ ಒಂದೊಂದು ವಿಶೇಷ ಅನುಗ್ರಹವನ್ನು ಶ್ರೀಮದಾಚಾರ್ಯರು ಅವರಿಂದ ಮಾಡಿಸುತ್ತಾರೆ. ಗಣಪತಿ ಸರ್ವಾರ್ಥಪ್ರದನಾದರೂ ವಿಶೇಷವಾಗಿ ವಿಘ್ನಪರಿಹಾರಕನಾಗಿರುವಂತೆ.

ನಮ್ಮ ಪರಂಪರಯಲ್ಲಿ ಬಂದ ಸಮಸ್ತ ಗುರುಗಳೂ ಹೀಗೆಯೇ ಒಂದೊಂದು ಗುಣವನ್ನು ಅನುಗ್ರಹಿಸಲು ನಮಗಾಗಿ ಅವತರಿಸಿ ಬಂದಿದ್ದಾರೆ. ಆಯಾ

ಗುರುಗಳ ಮಾಹಾತ್ಮ್ಯವನ್ನು ತಿಳಿಯುವ ಸಂದರ್ಭದಲ್ಲಿ ಅವನ್ನು ವಿಸ್ತೃತವಾಗಿ ತಿಳಿಯೋಣ.

ಶ್ರೀಪದ್ಮನಾಭತೀರ್ಥಶ್ರೀಪಾದಂಗಳವರಲ್ಲಿ ನಾವೇನು ಪ್ರಾರ್ಥಿಸಬೇಕು. ಅವರಿಂದ ನಾವು ಪಡೆಯುವ ಅನುಗ್ರಹವೆಂತಹುದು ಎನ್ನುವದಕ್ಕೆ ಈ ಲೇಖನದಲ್ಲಿ ಉತ್ತರವನ್ನು ಪಡೆಯೋಣ.

ಸಾಧನೆ ಎಂದರೆ ಶಾಸ್ತ್ರಾಧ್ಯಯನ, ಅಧ್ಯಾಪನ, ಸತ್ಕರ್ಮಗಳ ಅನುಷ್ಠಾನ ಮತ್ತು ತತ್ವಗಳ ಅನುಸಂಧಾನ. ಈ ಸಾಧನೆ ನಮ್ಮಿಂದ ಆರಂಭವಾಗುವದು ಅಷ್ಟು ಸುಲಭವಲ್ಲ. ಆರಂಭವಾಗಲೂ ಗುರ್ವನುಗ್ರಹ ಬೇಕು, ನಡೆಯಲೂ ಗುರ್ವನುಗ್ರಹ ಬೇಕು, ಈ ಸಾಧನೆಯ ಫಲವನ್ನು ಪಡೆಯಲೂ ಗುರ್ವನುಗ್ರಹ ಬೇಕು.

ನಮ್ಮಿಂದ ಸಾಧನೆ ನಡೆಯಲಿ ಎಂದು ಆಜ್ಞೆ ಮಾಡುವವರು, ನಡೆಯುವಂತೆ ಅನುಗ್ರಹಿಸುವವರು ಸಮಗ್ರ ಯತಿಕುಲಚಕ್ರವರ್ತಿಗಳಾದ ಶ್ರೀ ಪದ್ಮನಾಭತೀರ್ಥಶ್ರೀಪಾದಂಗಳವರು.

ಶ್ರೀಮದಾಚಾರ್ಯರು ಒಂದು ಮಹತ್ತ್ವದ ತತ್ವವನ್ನು ಸೂತ್ರಭಾಷ್ಯದಲ್ಲಿ ತಿಳಿಸುತ್ತಾರೆ. ಜೀವ ಜ್ಞಾನಾನಂದಸ್ವರೂಪದವನು. ಅವನ ಸ್ವರೂಪವೇ ಆದ ಆ ಅನಂದವನ್ನು ಅನುಭವಿಸಲೂ, ಆ ಜ್ಞಾನವನ್ನು ಪಡೆಯಲೂ ಶ್ರೀಹರಿ ನಮಗೆ ಆಜ್ಞೆ ಮಾಡಬೇಕು. ಕಾರಣ,ಜೀವ ಸರ್ವಾತ್ಮನಾ ಪರಮಾತ್ಮನ ಅಧೀನ.

ಹಾಗೆ, ಈ ಮಹಾವೇದಾಂತಸಾಮ್ರಾಜ್ಯದ ಚಕ್ರವರ್ತಿಗಳು ನಮ್ಮ ಶ್ರೀ ಪದ್ಮನಾಭತೀರ್ಥಶ್ರೀಗುರುಗಳು. ಅವರ ಆಜ್ಞೆಯಿಲ್ಲದೇ ನಾವು ಈ ಸಾಧನಪ್ರಪಂಚದಲ್ಲಿ ಮುನ್ನಡೆಯಲು ಸಾಧ್ಯವೇ ಇಲ್ಲ.

ನಾವು ಶ್ರೇಷ್ಠ ಸಜ್ಜನರ ಮಕ್ಕಳಾಗಿ ಹುಟ್ಟಿ ಬರಲೂ, ಹುಟ್ಟಿ ಬಂದ ಬಳಿಕ ಆಚಾರ್ಯರ ಶಾಸ್ತ್ರದ ಅಧ್ಯಯನವನ್ನು ಮಾಡಲೂ, ಓದುವ ಶಾಸ್ತ್ರಗಳು ಅರ್ಥವಾಗಲೂ, ಅರ್ಥವಾದ ಶಾಸ್ತ್ರ ಅನುಷ್ಠಾನಕ್ಕೆ ಬರಲೂ, ಅನುಷ್ಠಾನ ಮಾಡಿದ ಕರ್ಮಗಳ ಫಲ ದೊರೆಯಬೇಕಾದರೂ

ಶ್ರೀಪದ್ಮನಾಭತೀರ್ಥಶ್ರೀಪಾದಂಗಳವರ ಆಜ್ಞೆ ಇರಬೇಕು. ಅನುಗ್ರಹ ಪಡೆದಿರಬೇಕು.

ಸ್ವಯಂ ಟೀಕಾಕೃತ್ಪಾದರು ಈ ತತ್ವವನ್ನು ತಿಳಿಸಿ ಹೇಳುತ್ತಾರೆ —

ಸ ಪದ್ಮನಾಭತೀರ್ಥಾರ್ಕ-
ಗೋಗಣೋಸ್ತು ದೃಶೇ ಮಮ ।
ನ ತತ್ವಮಾರ್ಗೇ ಗಮನಂ
ವಿನಾ ಯದುಪಜೀವನಮ್ ।।

ಶ್ರೀ ಪದ್ಮನಾಭತೀರ್ಥರು ವೇದಾಂತಪ್ರಪಂಚದ ಸೂರ್ಯ. ಅವರ ವಾಣಿಯೇ ಅವರ ಪ್ರಕಾಶ. ಅದನ್ನು ಆಶ್ರಯಿಸದೇ ನಮಗೆ ತತ್ವಮಾರ್ಗದಲ್ಲಿ ನಡೆಯಲು ಸಾಧ್ಯವೇ ಇಲ್ಲ.

ಜ್ಞಾನಸಾಗರರಾದ ಶ್ರೀಮಟ್ಟೀಕಾಕೃತ್ಪಾದರೂ ಸಹಿತ ಶ್ರೀಪದ್ಮನಾಭತೀರ್ಥರನ್ನು ಅನನ್ಯವಾಗಿ ಆಶ್ರಯಿಸುತ್ತಾರೆ.

ಶ್ರೀನಾರಾಯಣಪಂಡಿತಾಚಾರ್ಯರು ಶ್ರೀ ಮಧ್ವವಿಜಯದಲ್ಲಿ ಶ್ರೀ ಪದ್ಮನಾಭತೀರ್ಥ-

ಶ್ರೀಪಾದಂಗಳವರ ಮಾಹಾತ್ಮ್ಯವನ್ನು ಹೇಳುತ್ತ ದಿವ್ಯವಾದ ಮಾತೊಂದನ್ನು ಹೇಳುತ್ತಾರೆ — **"ವೇದ-ಪ್ರವಚನಾಚಾರ್ಯಶಿಷ್ಯೋಸಾವಿತಿ ಪೂಜಿತಃ"** ಎಂದು.

ಶ್ರೀಮದಾಚಾರ್ಯರಿಗೆ ಶ್ರೀಪದ್ಮನಾಭತೀರ್ಥರು ಹಾಗೂ ಶ್ರೀ ಹೃಷೀಕೇಶತೀರ್ಥರೇ ಮುಂತಾದ ಎಂಟು ಜನ ಮಹಾಮಹಿಮರು ಸಾಕ್ಷಾತ್ ಶಿಷ್ಯರು. ಆಚಾರ್ಯರ ಕಾಲಕ್ಕೇನೆ, ಆಚಾರ್ಯರ ಶಿಷ್ಯರೆಂದರೆ ಶ್ರೀ ಪದ್ಮನಾಭತೀರ್ಥರು ಎಂದು ಸಮಗ್ರ ಜನತೆ ಇವರನ್ನು ಆದರಿಸುತ್ತಿತ್ತು, ಅರ್ಥಾತ್ ಆ ಅನುಗ್ರಹವನ್ನು ಆಚಾರ್ಯರು ಶ್ರೀಪದ್ಮನಾಭತೀರ್ಥಶ್ರೀಪಾದರ ಮೇಲೆ ಮಾಡಿದ್ದರು.

ಇದೇ ಸಂದರ್ಭದಲ್ಲಿ ತಿಳಿಯಬೇಕಾದ ಮತ್ತೊಂದು ಮಹತ್ತ್ವದ ಅಂಶವಿದೆ. ಕೆಲವರು ಶ್ರೀ ಪದ್ಮನಾಭತೀರ್ಥಶ್ರೀಪಾದರ ಮಾಹಾತ್ಮ್ಯವನ್ನು ಹೇಳುವ ಭರದಲ್ಲಿ ಆಚಾರ್ಯರ ಉಳಿದ ಎಂಟು ಜನ ಶಿಷ್ಯರಿಗೆ ಅವಮಾನ ಮಾಡುತ್ತಾರೆ. ಕೆಲವರು

ಅವರನ್ನು ಆದರಿಸುವ ನೆಪದಲ್ಲಿ ಪದ್ಮನಾಭತೀರ್ಥರಿಗೆ ಅವಮಾನ ಮಾಡುತ್ತಾರೆ.

ಎರಡೂ ಮಾರ್ಗಗಳೂ ಪಾಪಮಾರ್ಗಗಳೇ. ಆಚಾರ್ಯರ ದರ್ಶನ, ಅವರಿಂದ ಉಪದೇಶ ಪಡೆದ ಜನರನ್ನು ಯಾರು ಕಂಡಿದ್ದರೋ ಅವರೂ ಸಹ ಮಹಾನುಭಾವರು ಎಂದು ಪಂಡಿತಾಚಾರ್ಯರು ಚಿತ್ರಿಸುತ್ತಾರೆ. **"ತದ್ದಾಸದಾಸ್ಯಮಪಿ ಕಿಂ ನ ದದಾತಿ ಪುಂಸಃ"** ಎಂದು. ಅಂತಹುದರಲ್ಲಿ ಆಚಾರ್ಯರ ಶಿಷ್ಯರಲ್ಲಿ ಪ್ರಾಂತೀಯ ಅಭಿಮಾನವನ್ನು ತಾಳಿ ಅವಹೇಳನ ಮಾಡುವದು ಮಹಾ ಅನರ್ಥಕ್ಕೆ ಸಾಧನ.

ನೋಡಿ, ಧರ್ಮರಾಜ ಚಕ್ರವರ್ತಿ. ಮಹಾರಾಜ. ಭೀಮಸೇನ ಯುವರಾಜ. ಇದರಿಂದ ಏನಾದರೂ ಯೋಗ್ಯತೆಯಲ್ಲಿ ವ್ಯತ್ಯಾಸವಾಯಿತೇ? ಸರ್ವಥಾ ಇಲ್ಲ. ಧರ್ಮರಾಜ ಚಕ್ರವರ್ತಿಯಾಗಿ ಯಾವ ಗೌರವವನ್ನು ಪಡೆಯಲು ಅರ್ಹನೋ ಆ ಗೌರವವನ್ನು ನೀಡಲೇಬೇಕು. ಆ ಗೌರವಕ್ಕಿಂತ ಮಿಗಿಲಾಗಿ  ಭೀಮಸೇನದೇವರಲ್ಲಿ ನಾವು ಮಹಾಭಕ್ತಿಯನ್ನು ಮಾಡುತ್ತೇವೆ.

ಹಾಗೆ ಶ್ರೀ ಪದ್ಮನಾಭತೀರ್ಥ ಶ್ರೀಪಾದಂಗಳ-ವರಿಗಿಂತಲೂ ಹೆಚ್ಚಿನ ಅನುಗ್ರಹವನ್ನು ಆಚಾರ್ಯರಿಂದ ಪಡೆದವರು ಶ್ರೀ ಮಧ್ವಾನುಜಾಚಾರ್ಯರು. ಮಧ್ವವಿಜಯವೇ ಇದನ್ನು ಸ್ಪಷ್ಟವಾಗಿ ಹೇಳಿದೆ. ಹಾಗೆಯೇ, **"ಯಃ ಕರ್ಣಾಟಕಪೂರ್ವಸಜ್ಜನಗುರುಃ"** ಎಂದು ಜಗತ್ತಿನ ಸಮಸ್ತ ಸಜ್ಜನರಿಗೆ ಗುರುಗಳಾದವರು ಅರ್ಥಾತ್ ಯತಿಕುಲಚಕ್ರವರ್ತಿಗಳಾದವರು ಶ್ರೀ ಪದ್ಮನಾಭತೀರ್ಥಶ್ರೀಪಾದಂಗಳವರು.

ಬದರಿಯ ನಾರಾಯಣದೇವರ ಗುಡಿಯಲ್ಲಿಯೇ ಸೂತ್ರಭಾಷ್ಯದ ರಚನೆಯನ್ನು ಆರಂಭಿಸುವ ಶ್ರೀಮದಾಚಾರ್ಯರು ಅದನ್ನು ಮೊದಲಿಗೆ ಪಾಠ ಹೇಳಿದ್ದು ಶ್ರೀ ಶೋಭನಭಟ್ಟರಿಗೆ, ಅರ್ಥಾತ್ ಪೂರ್ವಾಶ್ರಮದ ಶ್ರೀ ಪದ್ಮನಾಭತೀರ್ಥರಿಗೆ. ಅದನ್ನು ಬರೆದ ಹೆಗ್ಗಳಿಕೆ ಶ್ರೀಮತ್ ಸತ್ಯತೀರ್ಥ ಶ್ರೀಪಾದಂಗಳವರದು. ಆಚಾರ್ಯರಿಂದ ಸಮಗ್ರ ಋಗ್ವೇದದ ಅರ್ಥವನ್ನು ಮೂರು ಬಾರಿ ಶ್ರವಣ ಮಾಡಿದ ಮಾಹಾತ್ಮ್ಯವೂ ಶ್ರೀ ಸತ್ಯತೀರ್ಥರದು. ಹೀಗಾಗಿ ಪ್ರತೀಜೀವವೂ ಭಿನ್ನ. ಪ್ರತೀ ಜೀವನ ಸಾಧನೆಯೂ ಭಿನ್ನ.

ಇಂದ್ರ ದೇವತಾಧಿಪತಿ. ದೇವತಾಸಭೆಯ ಮಧ್ಯದಲ್ಲಿ ಕೂಡುವ ಇಂದ್ರನ ಬಳಿಯಲ್ಲಿ ಕೂಡುವ ಉಪೇಂದ್ರ ಸಾಕ್ಷಾತ್ ಶ್ರೀಹರಿ.

ಲೋಕಗುರುವಾದ ಭೀಮಸೇನದೇವರಿಗೆ, ಅರ್ಜುನನಿಗೆ ಯೋಗ್ಯತೆಯಲ್ಲಿ ಸಣ್ಣವರಾದ ದ್ರೋಣಾಚಾರ್ಯರು ಗುರುಗಳು.

ಇದರಿಂದ ಯೋಗ್ಯತೆಯಲ್ಲಿ ಏನಾದರೂ ವ್ಯತ್ಯಾಸವಾಗುತ್ತದೆಯೇ, ಸರ್ವಥಾ ಇಲ್ಲ.

ಈ ಲೋಕದಲ್ಲಿ ಪರಮಾತ್ಮ, ಗುರುಗಳು ವಹಿಸುವ ಕಾರ್ಯದಿಂದ ಜೀವನ ತಾರತಮ್ಯ ಸಿದ್ಧವಾಗುವದಿಲ್ಲ. ಅವರಲ್ಲಿರುವ ಭಕ್ತಿ, ಜ್ಞಾನ, ವೈರಾಗ್ಯ ಮುಂತಾದ ಗುಣಗಳಿಂದ ಅವರ ಉತ್ತಮತ್ವ ಸಿದ್ಧವಾಗುತ್ತದೆ.

ಆಚಾರ್ಯರು ಶ್ರೀ ಪದ್ಮನಾಭತೀರ್ಥರನ್ನು ತಮ್ಮ ಪ್ರಧಾನಶಿಷ್ಯರನ್ನಾಗಿ ಸ್ವೀಕರಿಸಿರುವದು ಶ್ರೀಮಧ್ವವಿಜಯದಿಂದ ಸ್ಪಷ್ಟ. ಆದರೆ, ಪ್ರಾಂತೀಯ ಅಭಿಮಾನದಿಂದ ಆಚಾರ್ಯರ ಉಳಿದ ಶಿಷ್ಯರನ್ನು

ಅವಮಾನ ಮಾಡಿದಲ್ಲಿ ಮಹಾ ಅನರ್ಥ ನಿಶ್ಚಿತ. ಸಂಶಯವೇ ಇಲ್ಲ.

ಈ ವಿಷಯ ಇನ್ನೂ ಸುಲಭವಾಗಿ ಅರ್ಥವಾಗಬೇಕೆಂದರೆ ಮತ್ತೊಂದು ದೃಷ್ಟಾಂತವನ್ನು ನೀಡುತ್ತೇನೆ.

ಶ್ರೀಮಚ್ಚಂದ್ರಿಕಾಚಾರ್ಯರು ಪ್ರಹ್ಲಾದರಾಜರ ಅವತಾರ. ಆ ಪ್ರಹ್ಲಾದರಾಜರ ಗುರುಗಳಾದ ನಾರದರು ಪುರಂದರದಾಸರಾಗಿ ಹುಟ್ಟಿಬಂದು ಶ್ರೀ ವ್ಯಾಸರಾಜರಿಂದಲೇ ಅಂಕಿತೋಪದೇಶವನ್ನು ಪಡೆದು ಗುರುಗಳು ಎಂದೇ ಸ್ತೋತ್ರ ಮಾಡುತ್ತಾರೆ[1].

ಇದರರ್ಥ, ಚಂದ್ರಿಕಾಚಾರ್ಯರು ಪುರಂದರದಾಸರಿಗಿಂತ ಯೋಗ್ಯತೆಯಲ್ಲಿ ಹಿರಿಯರೆಂದೇ? ಖಂಡಿತ ಅಲ್ಲ.

---

[1] ಇತ್ತೀಚಿಗೆ ದಾಸಸಾಹಿತ್ಯವನ್ನು ನಿಂದಿಸುವ, ಪ್ರಮಿತವಾದ ಅವತಾರದ ವಿಷಯಗಳನ್ನೂ ಅಲ್ಲಗಳೆಯುವ, ಶ್ರೀ ವಿಜಯರಾಯರನ್ನು ಅವಮಾನಿಸುವ ಪ್ರವೃತ್ತಿ ಕೆಲವು ಜನರಲ್ಲಿ ಕಂಡುಬರುತ್ತಿದೆ. ಈ ಅವತಾರಗಳ ವಿಷಯದಲ್ಲಿ ಅತ್ಯಂತ ಹೀನಾಯವಾಗಿ ಮಾತನಾಡುವದನ್ನು ಕೇಳಿದ್ದೇನೆ. ಶ್ರೀ ವಿಜಯದಾಸರ ವಾಕ್ಯಗಳನ್ನು ಅರ್ಥ ಮಾಡಿಕೊಳ್ಳಬೇಕಾದರೆ ಇರಬೇಕಾದ ಎಚ್ಚರದ ಕುರಿತು ವಿಸ್ತೃತವಾಗಿ ಬರೆಯುತ್ತೇನೆ.

ಶ್ರೀಮಚ್ಚಂದ್ರಿಕಾಚಾರ್ಯರು ಶ್ರೀಮದಾಚಾರ್ಯರ, ಶ್ರೀ ಪದ್ಮನಾಭತೀರ್ಥರ, ಶ್ರೀಮಟ್ಟೀಕಾಕೃತ್ಪಾದರ ಪೀಠದಲ್ಲಿ ಕುಳಿತಿದ್ದಾರೆ. ಅಂದರೆ ಆ ಗುರುಗಳ ಸನ್ನಿಧಾನವನ್ನು ಹೊತ್ತು ಸಜ್ಜನರನ್ನು ಪಾಲಿಸುತ್ತಿದ್ದಾರೆ. ಆ ಸನ್ನಿಧಾನಕ್ಕೆ ಶ್ರೀ ಪುರಂದರದಾಸರು ತಲೆಬಾಗಿದರು. ಆ ಸನ್ನಿಧಾನವನ್ನು ಹೊತ್ತೇ ಶ್ರೀಮಚ್ಚಂದ್ರಿಕಾಚಾರ್ಯರು ಅವರನ್ನು ಶಿಷ್ಯರನ್ನಾಗಿ ಸ್ವೀಕರಿಸಿದರು.

ಶ್ರೀಮದಾಚಾರ್ಯರು ಒಬ್ಬೊಬ್ಬರಿಗೆ ಒಂದೊಂದು ಅಧಿಕಾರವನ್ನು, ಮಾಹಾತ್ಮ್ಯವನ್ನು ನೀಡಿ ಅವರಲ್ಲಿ ನಿಂತು ಆ ಕಾರ್ಯವನ್ನು ಮಾಡಿಸುತ್ತಾರೆ. ಸಮಗ್ರ ದೇವತಾಚಕ್ರವರ್ತಿಗಳಾದ ಆಚಾರ್ಯರು ಪದ್ಮನಾಭತೀರ್ಥರಲ್ಲಿ ಸನ್ನಿಹಿತರಾಗಿದ್ದು ಅವರನ್ನು ಸಮಗ್ರಮಾಧ್ವಯತಿಕುಲಚಕ್ರವರ್ತಿಗಳನ್ನಾಗಿ ಮಾಡಿದ್ದಾರೆ.

ನಮ್ಮ ವೇದಾಂತಸಾಮ್ರಾಜ್ಯದ ಆ ಚಕ್ರವರ್ತಿ ನಮ್ಮ ಮೇಲೆ ಅನುಗ್ರಹ ಮಾಡಿದಾಗ ಮಾತ್ರ, ನೀನು ಅಧ್ಯಯನ ಮಾಡು ಎಂದು ಆಜ್ಞೆ ಮಾಡಿದಾಗ

ಮಾತ್ರ ನಮ್ಮಿಂದ ಶುದ್ಧವಾದ ರೀತಿಯಲ್ಲಿ ಸಾಧನೆ ನಡೆಯಲು ಸಾಧ್ಯ.

ಶ್ರೀಹರಿಯ, ಶ್ರೀವೇದವ್ಯಾಸದೇವರ, ಶ್ರೀಮದಾಚಾರ್ಯರ ಆಜ್ಞಾಶಕ್ತಿಯನ್ನು ಹೊತ್ತ ಮಹಾಗುರುಳಿಗೆ

ಶ್ರೀಮದಾಚಾರ್ಯರ ಪರಮಾನುಗ್ರಹಕ್ಕೆ ಪಾತ್ರರಾಗಿ, ಅವರಿಂದ ಭಾಷ್ಯಶ್ರವಣ ಮಾಡಿದ ಮೊಟ್ಟ ಮೊದಲ ಶಿಷ್ಯರು ಎಂಬ ಪ್ರಖ್ಯಾತಿಗೆ ಪಾತ್ರರಾಗಿ, ಅವರ ಅನುಗ್ರಹದಿಂದ ಆಚಾರ್ಯರ ಭಾಷ್ಯಕ್ಕೆ ಪ್ರಥಮವ್ಯಾಖ್ಯಾನವನ್ನು ರಚಿಸಿದ ಆ ಮಹಾವ್ಯಾಖ್ಯಾನಕಾರರಿಗೆ,

ಶ್ರೀ ನರಹರಿತೀರ್ಥರಿಗೆ, ಶ್ರೀ ಮಾಧವತೀರ್ಥರಿಗೆ, ಶ್ರೀ ಅಕ್ಷೋಭ್ಯತೀರ್ಥಶ್ರೀಪಾದಂಗಳವರಿಗೆ ವಿದ್ಯೋಪದೇಶವನ್ನು ಮಾಡಿದ, ಇಂದಿಗೂ ವೃಂದಾವನದಲ್ಲಿ ಹಾಗೂ ತಮ್ಮ ಗ್ರಂಥಗಳಲ್ಲಿ ತೇಜೋರೂಪದಿಂದ ಸನ್ನಿಹಿತರಾಗಿ ಭಕ್ತರನ್ನು ಅನುಗ್ರಹಿಸುತ್ತಿರುವ ಸಮಗ್ರಯತಿಕುಲಸಾರ್ವಭೌಮರಾದ

ಶ್ರೀಪದ್ಮನಾಭತೀರ್ಥಶ್ರೀಪಾದಂಗಳವರ ಪರಮಪವಿತ್ರ ಚರಣಗಳಿಗೆ ಸಮಗ್ರ ಜೀವದ ಭಕ್ತಿಯಿಂದ ಸಾಷ್ಟಾಂಗ ನಮಸ್ಕಾರ ಮಾಡಿ ಬೇಡಿಕೊಳ್ಳೋಣ —

ಗುರುದೇವ, ಸಂಸಾರಸಾಗರದಿಂದ ನಮ್ಮನ್ನು ಉದ್ಧರಿಸಿ, ಶ್ರೀಮದಾಚಾರ್ಯರ ಪರಮಪವಿತ್ರ ಶಾಸ್ತ್ರವನ್ನು ಅಧ್ಯಯನ ಮಾಡುವ, ಅದನ್ನು ಶಿಷ್ಯರಿಗೆ ಪಾಠ ಹೇಳುವ, ತತ್ವಗಳನ್ನು ಅನುಷ್ಠಾನ ಮಾಡುವ, ಶ್ರೀಹರಿ-ವಾಯು-ಗುರುಗಳಲ್ಲಿ ಭಕ್ತಿ ಮಾಡುವ ಮಹಾಸೌಭಾಗ್ಯವನ್ನು ಕರುಣಿಸಿ ಎಂದು.

— ವಿಷ್ಣುದಾಸ ನಾಗೇಂದ್ರಾಚಾರ್ಯ

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಿಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, “Sri Madhwanuja Mandiram"
Kaveri Marga, Hemmige Village,
Talakadu, T Narasipura,
Mysore - 571122, Karnataka, India

nagendracharya@yahoo.co.in

WhatsApp: 9901 551 491